ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರ: 390/2018

ಚಾಸಾ: 14 ಪ್ರಾಸಾ:5

ದಿನಾಂಕ: 24.07.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ವಿನಾಯಕ ಬಿಲ್ಲವ |
| ತಂದೆಯ ಹೆಸರು | : | ಮಾಚ ಬಿಲ್ಲವ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಪೊಲೀಸ್ ನಿರೀಕ್ಷಕರು ಕರ್ನಾಟಕ ಲೋಕಾಯುಕ್ತ |
| ವಾಸ ಸ್ಥಳ | : | ಕಾರವಾರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು ನವೆಂಬರ್ 2017 ರಿಂದ ಜನವರಿ 2018ರವರೆಗೆ ಗಂಗೊಳ್ಳಿ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 10-12-2017 ರಂದು ಈ ಪ್ರಕರಣದ ಕಡತವನ್ನು ಚಾಸಾ-12 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ಇದೊಂದು ಘೋರ ಅಪರಾಧವಾದ ಕಾರಣ ಚಾಸಾ-19 ರವರು ನಡೆಸಬೇಕಾಗಿದ್ದು, ಅವರು ಹೊನ್ನಾವರ ಬಂದೊಬಸ್ತುವಿನಲ್ಲಿ ಇದ್ದ ಕಾರಣ ಅವರು ಮೌಖಿಕವಾಗಿ ಆದೇಶಿಸಿದ್ದು, ನಾನು ಅಪಘಾತ ಸ್ಥಳಕ್ಕೆ ಭೇಟಿ ಮಾಡಿ ಪಂಚರನ್ನು ಬರಮಾಡಿಕೊಂಡು ಚಾಸಾ-2 ರವರು ತೋರಿಸಿದ ಸ್ಥಳದಲ್ಲಿ ಚಾಸಾ-1 ಮತ್ತು 3ರವರ ಸಮಕ್ಷಮ ಪಂಚನಾಮೆಯನ್ನು ಬೆಳಗ್ಗೆ 9 ರಿಂದ 9-45ರವರೆಗೂ ಜರುಗಿಸಿ ನಕ್ಷೆಯನ್ನು ತಯಾರಿಸಿ ಪೋಟೋ ತೆಗೆದಿರುತ್ತೇನೆ. ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಅಪಘಾತಕ್ಕೆ ಒಳಗಾದ ಸೈಕಲು ಮತ್ತು ಲಾರಿಯನ್ನು ವಶಕ್ಕೆ ಪಡೆದು ಠಾಣೆಗೆ ತಂದು ಸ್ವತ್ತು ಪಟ್ಟಿಯಲ್ಲಿ ಅಳವಡಿಸಿರುತ್ತೇನೆ. ನಂತರ ಕಡತವನ್ನು ಸಿ ಪಿ ಐ ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿ ನಿಪಿ-2 ಮತ್ತು 3 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ-2(ಡಿ) ಮತ್ತು ನಿಪಿ-3(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-5 ನ್ನು ನೋಡಿ ಗುರುತಿಸಿರುತ್ತಾರೆ. ಸೈಕಲು ಮತ್ತು ಲಾರಿಯ 2 ಪೋಟೊಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-11 ಮತ್ತು 12 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಎಂ ಎಸ್ ರವರಿಂದಃ</u>**

ಠಾಣೆಯಿಂದ ಘಟನಾ ಸ್ಥಳ 1ವರೆಯಿಂದ 2 ಕಿ.ಮೀ. ಕಡತವನ್ನು ಸ್ವೀಕರಿಸಿ ಸ್ಥ,ಳ ಪಂಚನಾಮೆ ತಯಾರಿಸಿರುತ್ತೇನೆ. ಅಪಘಾತವಾದ ಮಾರನೇ ದಿನ ಸ್ಥಳ ಪಂಚನಾಮೆ ಜರುಗಿಸಿರುತ್ತೇನೆ. ಸಾಮಾನ್ಯವಾಗಿ ವಿಳಂಬವಿಲ್ಲದೆ ಪಂಚನಾಮೆ ಜರುಗಿಸಿದರೆ ಸಾಕ್ಷಿ ಉಳಿಯುವುದು ಸಾಧ್ಯವಿರುತ್ತದೆ ಎಂದರೆ ಸರಿಯಲ್ಲ. ಪಂಚನಾಮೆಯ ಸಾಕ್ಷಿದಾರರನ್ನು ಬರಮಾಡಿಕೊಳ್ಳಲು ಲಿಖಿತ ತಿಳುವಳಿಕೆ ನೀಡಿಲ್ಲ. ಅವರ ಮನೆ ಅಪಘಾತ ಸ್ಥಳದಿಂದ ಎಷ್ಟು ದೂರ ಎಂದು ಹೇಳಲಾಗುವುದಿಲ್ಲ.

ನಿಪಿ-2 ಮತ್ತು 3ನ್ನು ಠಾಣೆಯಲ್ಲಿ ತಯಾರಿಸಿ ಸಾಕ್ಷಿದಾರರ ಸಹಿಯನ್ನು ಠಾಣೆಯಲ್ಲಿಯೇ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಸ್ಥಳಕ್ಕೆ ಭೇಟಿ ನೀಡಿದಾಗ ಸ್ಥಳದಲ್ಲಿ ವಾಹನಗಳು ಇದ್ದವು. ನಿಪಿ-5 ರಲ್ಲಿ ಸದ್ರಿ ವಾಹನಗಳು ಕಂಡು ಬರುವುದಿಲ್ಲ ಎಂದರೆ ಸರಿ. ಲಾರಿ ಕುಂದಾಪುರದಿಂದ ಬೈಂದೂರು ಮಾರ್ಗವಾಗಿ ರಾ.ಹೆದ್ದಾರಿಯಲ್ಲಿ ಹೋಗುತ್ತಿತ್ತು. ಅದು ನೇರ ರಸ್ತೆಯಾಗಿದ್ದು ವಾಹನ ಸಂಧಣಿ ಇರುತ್ತದೆ ಎಂದರೆ ಸರಿ. ಮೃತ ಆನಂದ ಹೆಬ್ಬಾರ್ ರವರಿಗೆ ಚಾಸಾ-1 ತಮ್ಮನ ಮಗ. ಚಾಸಾ-1 ಅಪಘಾತದ ಪ್ರತ್ಯಕ್ಷದರ್ಶಿ ಅಲ್ಲ. ಅಪಘಾತ ಯಾರ ತಪ್ಪಿ ನಿಂದ ಆಯಿತು ಎಂಬ ಬಗ್ಗೆ ಪ್ರಾಸಾ-1 ರವರಿಗೆ ತಿಳಿದಿರುವ ಮಾಹಿತಿ ನನಗೆ ಇಲ್ಲ.

ಚಾಸಾ-2 ಮತ್ತು 3 ಮೃತರ ಸ್ನೇಹಿತರು ಎಂದರೆ ನನಗೆ ತಿಳಿದಿಲ್ಲ. ಚಾಸಾ-1 ರಿಂದ 3 ರವರು ಮೃತರಿಗೆ ಬೇಕಾದವರು ಆದ ಕಾರಣ ಅವರಿಗೆ ಅಪಘಾತದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲವಾದರೂ ಸಾಕ್ಷಿದಾರರಾಗಿ ಅನುಕೂಲತೆಗಾಗಿ

ಸೇರಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಮೃತರ ಅಜಾಗರೂಕತೆಯಿಂದ ಮತ್ತು ನಿರ್ಲಕ್ಷ್ಯತನದಿಂದ ಈ ಅಪಘಾತ ಸಂಭವಿಸಿದೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಯನ್ನು ಸರಿಯಾಗಿ ಕೈಗೊಳ್ಳದೆ ಕಡತವನ್ನು ಮೇಲಾಧಿಕಾರಿಯವರಿಗೆ ವಹಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**